# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **300**

2 ಸದಸ್ಯರ ಹೆಸರು : **ಶ್ರೀ ಶಶೀಲ್ ಜಿ. ನಮೋಶಿ**

3 ಉತ್ತರಿಸಬೇಕಾದ ದಿನಾಂಕ : **06.03.2025**

4 ಉತ್ತರಿಸುವ ಸಚಿವರು : **ಗೃಹ ಸಚಿವರು**

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಪುರಸಭೆಗೆ ದಿನಾಂಕ: 12.02.2025 ರಂದು ನಡೆದ ಚುನಾವಣೆಯಲ್ಲಿ ಭದ್ರತೆಗೆ ನಿಯೋಜನೆಗೊಂಡಿದ್ದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ತಾಲ್ಲೂಕಿನ ಪೊಲೀಸ್ ವೃತ್ತ ನಿರೀಕ್ಷಕರುಗಳಿಂದ ಕರ್ತವ್ಯ ಲೋಪವಾಗಿದ್ದು ಏಕ ಪಕ್ಷಿಯ ನಡವಳಿಕೆ ತೋರಿಸಿ ಕಾನೂನುಬಾಹಿರ ಕೆಲಸ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |
| (ಆ) | ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುದಿಲ್ಲ |
| (ಇ) | ಆ ದಿನದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಸದಸ್ಯರನ್ನು ಹೆಣ್ಣುಮಕ್ಕಳೆಂದು ಕೂಡ ಲೆಕ್ಕಿಸದೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಪೊಲೀಸ್ ವೃತ್ತ ನಿರೀಕ್ಷಕರು ಜನ ಸಾಮಾನ್ಯರ ಮುಂದೆಯೇ ಅಪಹರಿಸಿಕೊಂಡು ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ:12.02.2025 ರಂದು ಜೇವರ್ಗಿ ಪುರಸಭೆ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ ಸಮಯದಲ್ಲಿ ನಿಷೇದಾಜ್ಞೆ ಇದ್ದ ಪ್ರಯುಕ್ತ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ವೃತ್ತ ನಿರೀಕ್ಷಕರು ಪೊಲೀಸ್ ಬಂದೋಬಸ್ತ್ ಕರ್ತವ್ಯದ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಕಾನೂನು ರೀತಿ ಅವಶ್ಯಕ ಕ್ರಮವನ್ನು ಕೈಗೊಂಡಿರುತ್ತಾರೆ. ಆದಾಗ್ಯೂ ಚುನಾಯಿತ ಸದಸ್ಯರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಶ್ಯಕವಾದ ರಕ್ಷಣೆ ನೀಡಲು ಕ್ರಮವಹಿಸದ ಪೊಲೀಸ್ ಅಧಿಕಾರಿಗಳ ಪಾತ್ರದ ಕುರಿತು ತನಿಖೆ ನಡೆಸಲು ಡಿಜಿ ಮತ್ತು ಐಜಿಪಿರವರಿಗೆ ಸೂಚನೆ ನೀಡಲಾಗಿದೆ. |
| (ಈ) | ಬಂದಿದ್ದಲ್ಲಿ, ಆ ಸಮಯದಲ್ಲಿ ಪ್ರಶ್ನಿಸಿದ ಆ ಜಿಲ್ಲೆಯ ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು ಎಂಬುದನ್ನು ಕೂಡ ಲೆಕ್ಕಿಸದೆ ಅವರನ್ನು ತಳ್ಳಿ ನೂಕಾಡಿ ಹಕ್ಕು ಚ್ಯುತಿ ಮಾಡಿ ಸರ್ವಾಧಿಕಾರಿ ಧೋರಣೆ ತೋರಿಸಿದ್ದ ಈ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು? | |

ಸಂಖ್ಯೆ: ಒಇ 83 ಪಿಇಜಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು